


# ಮರೆತು ಹೋದ ಮಿಳ್ಳೆ ಗಡಿಯಾರ

ಚಿತ್ರದಲ್ಲಿ ಕಾಣುತ್ತಿರುವುದು ಒಂದು ಕಾಲದಲ್ಲಿ ಮಕ್ಕಳಿಗಾಗಿ ತಯಾರಿಸುತ್ತದ್ದ 'ಮಿಳ್ಳೆ ಗಡಿಯಾರ' ಹಿರಿಯರಿಗೆ ನೆನಪಿಗೆ ಬರಬಹುದು. ಹಿಂದೆ ತಮ್ಮ ಮಕ್ಕಳಿಗೆ ತಾಯಿಯೋ, ತಂದೆಯೋ ಈ ಮಿಳ್ಳೆ ಗಡಿಯಾರವನ್ನು ತಾವೇ ತಯಾರಿಸಿ ಕೊಡುತ್ತಿದ್ದರು. ತೆಂಗಿನ ಮರದ ಮಿಳ್ಳೆಗೆ (ಬಲಿಯದ ಅತಿ ಚಿಕ್ಕ ತೆಂಗಿನಕಾಯಿ), ತೆಂಗಿನ ಗರಿಯ ಗಟ್ಟಿ ಕಡ್ಡಿಯನ್ನು ಬಾಗಿಸಿ ಎರಡು ತುದಿಗಳನ್ನು ಮಿಳ್ಳೆಗೆ ಚುಚ್ಚಿ, ಮಧ್ಯದಲ್ಲಿ ಇನ್ನೊಂದು ಗರಿಯ ಕಡ್ಡಿಯನ್ನು ನೇರವಾಗಿ ಚುಚ್ಚಿ ಇವುಗಳ ಮಧ್ಯೆ ಎರಡು ಕಡ್ಡಿಗಳನ್ನು ನೆಣಿಕೆಯಂತೆ ಜೋಡಿಸಿ ತಿರುಗಿಸಿದಾಗ ಟಿಕ್... ಟಿಕ್...ಟಿಕ್... ಎನ್ನುವ ಮಜವಾದ ಸಪ್ಪಳ ಕೇಳುತ್ತದೆ. ಅದನ್ನು ಕೇಳಿ ಚಿಕ್ಕ ಮಕ್ಕಳು ಆನಂದಿಸುತ್ತಿದ್ದರು. ಈಗ ಬೇರೆ ಬೇರೆ ಆಟಿಕೆ ಸಾಮಾನು ಸಿಗುವಾಗ ಮಿಳ್ಳೆ ಗಡಿಯಾರವನ್ನು ಸಂಪೂರ್ಣವಾಗಿ ನಾವು ಮರೆತಿದ್ದೇವೆ. ಅಂಕೋಲಾ ತಾಲ್ಲೂಕಿನ ಗಡಿಗ್ರಾಮವಾದ ಹಳವಳ್ಳಿಯ ಕೋಟೆ ನಿವಾಸಿ ಹಾಗೂ ಆದರ್ಶ ಕೃಷಿಕ ನರಸಿಂಹ ಭಾಗವತರ ಮನೆಗೆ ಹೋದಾಗ ಅವರ ಮಗುವಿನ ಕೈಯಲ್ಲಿ ಅವರೇ ತಯಾರಿಸಿ ಕೊಟ್ಟ ಮಿಳ್ಳೆ ಗಡಿಯಾರ ಕಂಡು ನಾನು ಹಿಂದಿನ ಕಾಲಕ್ಕೆ ಜಾರುವಂತಾಯಿತು.

–ಬೀರಣ್ಣ ನಾಯಕ ಮೊಗಟಾ



# ಹಸಿರೆಲೆಯಲ್ಲಿ ಕಂಡ ಬಿದಿಗೆ ಚಂದಿರ

ಯುಗಾದಿಯ ದಿನ ಇಳಿಸಂಜೆ ಬಿದಿಗೆ ಚಂದಿರನ ದರ್ಶನಕ್ಕಾಗಿ ಇಡೀ ಆಗಸವನ್ನು ಕಂಗಳ ಜರಡಿಯಲ್ಲಿ ಸೋಸಿ ಸೋಸಿ ಸುಸ್ತಾಗತೊಡಗಿತು. ಮೋಡಗಳ ಮರೆಯಲ್ಲೆಲ್ಲೋ ಅವಿತು ಕೂತಿದ್ದ ಚಂದಿರ ಸುಲಭವಾಗಿ ಕಾಣಿಸಿಕೊಳ್ಳದೇ ಸತಾಯಿಸುತ್ತಿರುವಾಗ ಆಗಸದಿಂದ ಜಾರಿದ ನನ್ನ ದೃಷ್ಟಿ ಅದರಡಿಗಿದ್ದ ಮರದತ್ತ ಹೋಯಿತು. ಅದೊಂದು ಸಿಂಗಪುರ ಚೆರ್ರಿ ಮರ, ಮನೆಯಂಗಳದಲ್ಲಿ ನೆಟ್ಟದ್ದು ಇಂದು ನಮಗೆ ನೆರಳಾಗಿ ಅನೇಕ ಜೀವಿಗಳಿಗೆ ಕರುಳಾಗಿ ನಿಂತಿದೆ. ಇಂತಹ ಪರೋಪಕಾರಿಯ ಎಲೆಗಳಲ್ಲಿ ಏನೋ ವ್ಯತ್ಯಾಸ ಇರುವಂತೆ ಭಾಸವಾಯಿತು, ಹತ್ತಿರ ಹೋಗಿ ನೋಡಿದರೆ ಬಹುತೇಕ ಎಲೆಗಳು ಅರ್ಧಚಂದ್ರಾಕಾರದಲ್ಲಿ ಕತ್ತರಿಸಿದಂತಿವೆ. ಅರೇ ಇದೇನಿದು? ಎಲೆಗಳನ್ನು ಹೀಗೆ ಕೊಯ್ದವರಾರು? ಏಕೆ? ಎಂದು ಮನದಲ್ಲೇ ಪ್ರಶ್ನಿಸಿಕೊಳ್ಳುತ್ತಿರುವಾಗಲೇ ಎಲ್ಲಿಂದಲೋ ಬಂದ ಜೇನ್ನೊಣವೊಂದು ಈ ಮರದ ಮೇಲೆ ನಿನಗೇನು ಹಕ್ಕೇ ಇಲ್ಲವೆಂಬಂತೆ ನನ್ನನ್ನು ನಿರ್ಲಕ್ಷ್ಯಿಸಿ ತನ್ನ ಪಾಡಿಗೆ ತಾನು ಎಲೆಯನ್ನು ಅರ್ಧಚಂದ್ರಾಕಾರದಲ್ಲಿ ಕೊಯ್ದುಕೊಂಡು ಅದನ್ನು ತನ್ನ ಕಾಲಡಿಯಲ್ಲಿಟ್ಟುಕೊಂಡು 'ಹ್ಯಾರಿ ಪಾಟರ್'ನಂತೆ ಸುಂಯ್ ಎಂದು ಹಾರಿಹೋಯಿತು.

ಎಲೆ ಕತ್ತರಿಸುವ ಜೇನುನೊಣಗಳು (megachile bicolor) ಸಾಮಾನ್ಯವಾಗಿ ಹೀಗೆ ಕತ್ತರಿಸಿದ ಎಲೆಗಳಿಂದ ತಮ್ಮ ಗೂಡುಗಳನ್ನು ನಿರ್ಮಿಸಿಕೊಳ್ಳುತ್ತವೆ ಹಾಗೂ ಪ್ರತಿ ಎಲೆಯೂ ಒಂದೊಂದು ಕೋಶದಂತಿದ್ದು ಇದರಲ್ಲಿ ಅವುಗಳ ಮೊಟ್ಟೆಗಳಿರುತ್ತವೆ. ಅತ್ಯಂತ ಪರಿಣಾಮಕಾರಿ ಪರಾಗಸ್ಪರ್ಶ ಮಾಡುವ ಈ ಜೀವಿಗಳು ಇಂದು ಆಧುನಿಕ ಕೃಷಿ ಪದ್ಧತಿಗಳು ಹಾಗೂ ಆಧುನಿಕ ಜೀವನಶೈಲಿಯಿಂದಾಗಿ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಬಾಲ್ಯದಲ್ಲಿ ಇವುಗಳ ಗೂಡುಗಳನ್ನು ಬಾಗಿಲಿನ ತೋಳುಗಳ ಸಂದುಗಳಲ್ಲಿ, ಫೋಟೊ ಫ್ರೇಮಿನ ಕುಳಿಗಳಲ್ಲಿ ನೋಡುತ್ತಿದ್ದೆವು. ನಂತರ ಈ ಜೀವಿಗಳನ್ನು ಎಷ್ಟೋ ವರ್ಷಗಳ ಬಳಿಕ ಮತ್ತೆ ಕಂಡಾಗ ಬಿದಿಗೆ ಚಂದಿರನನ್ನು ಕಂಡಷ್ಟೇ ಖುಷಿಯಾಯಿತು. ಜೊತೆಗೆ ಇವುಗಳ ಅಸ್ತಿತ್ವಕ್ಕುಂಟಾದ ಧಕ್ಕೆ ಇಡೀ ಜೀವಸಂಕುಲದ ಮೇಲೆ ಬೀರುವ ಪರಿಣಾಮ ನೆನೆದು ಆತಂಕವೂ ಉಂಟಾಯಿತು.

–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

